Akashvani : Bengaluru
National Bulletin In Kannada
03.10.2025 : 7.35pm
ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

*******

<><*<><>*><>

ಮುಖ್ಯಾಂಶಗಳು

- ಭಯೋತ್ಪಾದನಾ ದಾಳಿಗೆ ಪ್ರತ್ಯುತ್ತರವಾಗಿ ನಡೆಸಲಾದ ಆಪರೇಷನ್ ಸಿಂದೂರ್ ಕಾರ್ಯಾಚರಣೆ ಮಾನವತೆಯ ಜಯ: ರಾಷ್ಟ್ರಪತಿ ದ್ರೌಪದಿ ಮುರ್ಮು
- ಡಿಸೆಂಬರ್ ನಲ್ಲಿ ಭಾರತ ಪ್ರವಾಸ: ಪ್ರಧಾನಿ ನರೇಂದ್ರ ಮೋದಿ ಭೇಟಿಗಾಗಿ ಎದುರು ನೋಡುತ್ತಿದ್ದೇನೆ: ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್
- ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್: ಭಾರತಕ್ಕೆ ಮತ್ತೆರಡು ಪದಕ, ಪದಕಪಟ್ಟಿಯಲ್ಲಿ ಭಾರತಕ್ಕೆ ಏಳನೇ ಸ್ಥಾನ
- ವೇಯ್ಟ್ ಲಿಫ್ಟಿಂಗ್ ವಿಶ್ವ ಚಾಂಪಿಯನ್‌ಶಿಪ್ : ಮಹಿಳೆಯರ ೪೮ ಕೆಜಿ ವಿಭಾಗದಲ್ಲಿ ಭಾರತದ ಮೀರಾಬಾಯಿ ಚಾನುಗೆ ಬೆಳ್ಳಿ ಪದಕ

****************

ದೇಶಾದ್ಯಂತ ದಸರಾ ಹಬ್ಬದ ೧೦ನೇ ದಿನವಾದ ನಿನ್ನೆ ವಿಜಯದಶಮಿಯನ್ನು ಸಡಗರ-ಸಂಭ್ರಮದಿಂದ ಆಚರಿಸಲಾಯಿತು. ದೆಹಲಿಯಲ್ಲಿ ನಿನ್ನೆ ಸಂಜೆ ನಡೆದ ರಾವಣ ದಹನ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಭಾಗವಹಿಸಿ, ಕಲಾವಿದರಿಗೆ ಶುಭ ಕೋರಿದರು. ಕಲಾವಿದರು ರಾಮಾಯಣದ ಪಾತ್ರಧಾರಿಗಳಾಗಿ ರಂಜಿಸಿದರು. ಬಳಿಕ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಾತನಾಡಿ, ವಿಜಯದಶಮಿ ಹಬ್ಬ ಅನ್ಯಾಯದ ವಿರುದ್ಧ ನ್ಯಾಯದ ಜಯ, ಅಹಂಕಾರದ ವಿರುದ್ಧ ವಿನಮ್ರತೆಯ ಜಯ, ದುಷ್ಟತನದ ವಿರುದ್ಧ ಒಳ್ಳೆಯತನದ ಜಯದ ಪ್ರತೀಕ. ಮನುಷ್ಯನೊಳಗಿನ ದುಷ್ಟತನವನ್ನು ತೊಡೆದುಹಾಕಿ ಒಳ್ಳೆಯತನವನ್ನು ಪೋಷಿಸುವುದು ರಾವಣ ದಹನದ ಸಂತೇಕವಾಗಿದೆ ಎಂದರು.

ಧ್ವನಿ - ರಾಷ್ಟ್ರಪತಿ - ೨೬ ಸೆಕೆಂಡ್

ಭಯೋತ್ಪಾದನಾ ದಾಳಿಗೆ ಪ್ರತ್ಯುತ್ತರವಾಗಿ ನಡೆಸಲಾದ ಆಪರೇಷನ್ ಸಿಂದೂರ್ ಕಾರ್ಯಾಚರಣೆ ಕೂಡಾ ಮಾನವತೆಯ ಜಯವಾಗಿದೆ. ಇದಕ್ಕಾಗಿ ದೇಶದ ವೀರ ಯೋಧರ ಕಾರ್ಯ ಶ್ಲಾಘನೀಯ ಎಂದು ಹೇಳಿದರು. ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದ ಜನರು ರಾವಣ ಪ್ರತಿಕೃತಿ ದಹನ ಕಾರ್ಯಕ್ರಮವನ್ನು ಕಣ್ತುಂಬಿಕೊಂಡರು.

***************

ವಿಶ್ವವಿಖ್ಯಾತ, ನಾಡಹಬ್ಬ ಮೈಸೂರು ದಸರಾ ಮಹೋತ್ಸವ ಯಶಸ್ವಿಯಾಗಿ ಸಂಪನ್ನಗೊಂಡಿದೆ. ನಿನ್ನೆ ರಾತ್ರಿ ಮೈಸೂರಿನ ಬನ್ನಿ ಮಂಟಪ ಮೈದಾನದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಕವಾಯತು ವೀಕ್ಷಿಸಿ ಗೌರವ ವಂದನೆ ಸ್ವೀಕರಿಸಿ ಪಂಜಿನ ಕವಾಯತು ವೀಕ್ಷಿಸಿದರು. ಈ ಮೂಲಕ ಈ ಬಾರಿಯ ವೈಭವದ ದಸರಾ ಮಹೋತ್ಸಕ್ಕೆ ತೆರೆ ಬಿತ್ತು. ಇದಕ್ಕೂ ಮುನ್ನ ಮಸೂರು ಅರಮನೆ ಆವರಣದಲ್ಲಿ ಜಂಬೂಸವಾರಿಗೆ ಪುಷ್ಪಾರ್ಚನೆ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದರು. ೬ನೇ ಬಾರಿ ಚಿನ್ನದ ಅಂಬಾರಿ ಹೊತ್ತು ಕ್ಯಾಪ್ಟನ್ ಅಭಿಮನ್ಯು ಸಾಗಿದ್ದು, ಮಾವುತ ವಸಂತ ಆನೆಯನ್ನ ಮುನ್ನಡೆಸಿದರು. ಅಭಿಮನ್ಯುವಿನೊಂದಿಗೆ ಕುಮ್ಕಿ ಆನೆಗಳಾದ ಕಾವೇರಿ ಮತ್ತು ರೂಪಾ ಹೆಜ್ಜೆ ಹಾಕಿದವು. ಆರನೇ ಬಾರಿಗೆ ಕ್ಯಾಪ್ಟನ್ ಅಭಿಮನ್ಯು ೭೫೦ ಕೆ.ಜಿ. ತೂಕದ ಅಂಬಾರಿ ಹೊತ್ತು ಬನ್ನಿ ಮಂಟಪದವರೆಗೆ ಹೆಜ್ಜೆ ಹಾಕಿದ. ಈ ಬಾರಿ ಮೆರವಣಿಗೆಯಲ್ಲಿ ೫೮ ಸ್ತಬ್ಧ ಚಿತ್ರಗಳು ೧೨೫ಕ್ಕೂ ಹೆಚ್ಚು ಕಲಾತಂಡಗಳು ೧೪ ಆನೆಗಳು ಅಶ್ವಾರೋಹಿ ಪಡೆಗಳು ಭಾಗವಹಿಸಿದ್ದವು. ದಸರಾ ಜಂಬೂಸವಾರಿ ವೀಕ್ಷಿಸಲು ಅರಮನೆ ಅಂಗಳದಲ್ಲಿ ೪೮ ಸಾವಿರ ಆಸನಗಳ ವ್ಯವಸ್ಥೆ ಮಾಡಲಾಗಿತ್ತು. ಅರಮನೆಯ ಉತ್ತರ ದ್ವಾರದ ಮೂಲಕ ತೆರಳಿದ ಜಂಬೂಸವಾರಿ ಮೆರವಣಿಗೆ ಕೆ.ಆರ್ ಸರ್ಕಲ್, ಸಯ್ಯಾಜಿರಾವ್ ರಸ್ತೆ, ಸರ್ಕಾರಿ ಆಯುರ್ವೇದ ಆಸ್ಪತ್ರೆ ಸರ್ಕಲ್, ಬಂಬೂ ಬಜಾರ್, ಹೈವೇ ಸರ್ಕಲ್ ಮೂಲಕ ಸಾಗಿ ಸಂಜೆ ವೇಳೆಗೆ ಬನ್ನಿಮಂಟದ ಪಂಜಿನ ಕವಾಯತು ಮೈದಾನ ತಲುಪಿತು.

***************

ಡಿಸೆಂಬರ್ ಆದಿ ಭಾಗದಲ್ಲಿ ಭಾರತಕ್ಕೆ ಭೇಟಿ ನೀಡಲು ಕಾತರದಿಂದ ಕಾಯುತ್ತಿರುವುದಾಗಿ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಹೇಳಿದ್ದಾರೆ. ತಮ್ಮ ಆತ್ಮೀಯ ಸ್ನೇಹಿತ ಮತ್ತು ರಷ್ಯಾದ ವಿಶ್ವಾಸಾರ್ಹ ಪಾಲುದಾರ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗಿನ ಭೇಟಿಗಾಗಿ ಎದುರು ನೋಡುತ್ತಿರುವುದಾಗಿ ಅವರು ತಿಳಿಸಿದ್ದಾರೆ. ಸೋಚಿಯಲ್ಲಿ ನಿನ್ನೆ ನಡೆದ ೨೦೨೫ ರ ಸಭೆಯಲ್ಲಿ ಮಾತನಾಡಿದ ರಷ್ಯಾ ಅಧ್ಯಕ್ಷ ಪುಟಿನ್, ನವದೆಹಲಿಯೊಂದಿಗಿನ ಮಾಸ್ಕೋದ ದೀರ್ಘಕಾಲದ ನಂಬಿಕೆಯನ್ನು ಪುನರುಚ್ಚರಿಸಿದರು ಹಾಗೂ ಪ್ರಧಾನಿ ಮೋದಿ ಅವರನ್ನು ತಮ್ಮ ರಾಷ್ಟ್ರದ ಹಿತಾಸಕ್ತಿಗಳ ಕಡೆಗೆ ಬಲವಾಗಿ ಗಮನಹರಿಸುವ ಅತ್ಯಂತ ಸಮಂಜಸ, ಬುದ್ಧಿವಂತ ನಾಯಕ ಎಂದು ಬಣ್ಣಿಸಿದರು. ಎರಡು ದೇಶಗಳ ನಡುವಿನ ಪ್ರಸ್ತುತ ವ್ಯಾಪಾರ ವಹಿವಾಟು ಅದರ ನಿಜವಾದ ಸಾಮರ್ಥ್ಯಕ್ಕಿಂತ ಕಡಿಮೆಯಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಪರಿಣಾಮಕಾರಿ, ಪರಸ್ಪರ ಪ್ರಯೋಜನಕಾರಿ ವ್ಯಾಪಾರ ಸಂಬಂಧಗಳನ್ನು ನಿರ್ಮಿಸುವ ಅಗತ್ಯವಿದೆ ಎಂದು ಅವರು ಒತ್ತಿ ಹೇಳಿದರು. ಹೆಚ್ಚಿನ ಅವಕಾಶಗಳನ್ನು ತೆರೆಯಲು ಪ್ರಮುಖ ಸಮಸ್ಯೆಗಳನ್ನು ಪರಿಹರಿಸುವತ್ತ ಈಗ ಗಮನ ಹರಿಸಬೇಕಿದೆ. ಸಾಗಾಣೆ ವಲಯದ ಸವಾಲುಗಳನ್ನು ಪರಿಹರಿಸುವ, ಹಣಕಾಸು ಕಾರ್ಯವಿಧಾನಗಳನ್ನು ಸುಧಾರಿಸುವ ಮತ್ತು ಬ್ರಿಕ್ಸ್ ಸಾಧನಗಳಲ್ಲಿ ಗಡಿಯಾಚೆಗಿನ ಪಾವತಿಗಳಿಗೆ ಹೊಸ ಪರಿಹಾರಗಳನ್ನು ಕಂಡುಹಿಡಿಯುವ, ದ್ವಿಪಕ್ಷೀಯ ಆಧಾರದ ಮೇಲೆ, ರೂಪಾಯಿ ಅಥವಾ ಮೂರನೇ ದೇಶದ ಕರೆನ್ಸಿಗಳನ್ನು ಬಳಸುವುದು ಅಥವಾ ವಿದ್ಯುನ್ಮಾನ ಪಾವತಿ ವಿಧಾನಗಳನ್ನು ಉತ್ತೇಜಿಸುವ ಗುರಿ ಹೊಂದಲಾಗಿದೆ ಎಂದರು. ವ್ಯಾಪಾರ ಮತ್ತು ಆರ್ಥಿಕ ಸಂಬಂಧಗಳನ್ನು ಬಲಪಡಿಸಲು ತಳಮಟ್ಟದ ಕ್ರಮಗಳನ್ನು ಜಾರಿಗೆ ತರಬೇಕಾಗಿದೆ. ವ್ಯಾಪಾರದ ಹೊರತಾಗಿ, ಅಂತಾರಾಷ್ಟ್ರೀಯ ರಾಜತಾಂತ್ರಿಕ ವಿಷಯಗಳಲ್ಲಿ ರಷ್ಯಾ ಮತ್ತು ಭಾರತದ ನಡುವಿನ ಬಲವಾದ ಸಮನ್ವಯತೆ ಅಗತ್ಯವಿದೆ ಎಂದು ರಷ್ಯಾ ಅಧ್ಯಕ್ಷ ಪುಟಿನ್ ಒತ್ತಿ ಹೇಳಿದರು.

****************

ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಮತ್ತು ನಾಗರಿಕ ವಿಮಾನಯಾನ ಸಚಿವ ರಾಮ್ ಮೋಹನ್ ನಾಯ್ಡು ಕಿಂಜರಪು ಅವರು ನವದೆಹಲಿಯಲ್ಲಿ ನಿನ್ನೆ ಏರ್‌ಬಸ್ ಮತ್ತು ಇಂಡಿಗೋ ನಾಗರಿಕ ವಿಮಾನ ಸಂಸ್ಥೆಗಳ ಉನ್ನತ ಕಾರ್ಯನಿರ್ವಾಹಕರೊಂದಿಗೆ ಉನ್ನತ ಮಟ್ಟದ ಸಭೆ ನಡೆಸಿದರು.

ನಾಗರಿಕ ವಿಮಾನಯಾನ ವಲಯವನ್ನು ಬಲಪಡಿಸುವ ಮತ್ತು ಭಾರತ ಹಾಗೂ ಐರೋಪ್ಯ ದೇಶಗಳ ನಡುವಿನ ಆರ್ಥಿಕ ಸಂಬಂಧಗಳನ್ನು ವ್ಯಾಪಕಗೊಳಿಸುವ ಕುರಿತು ಚರ್ಚಿಸಿದರು.ಸ್ವಾವಲಂಬನೆ ಮತ್ತು ಸುಸ್ಥಿರ ಬೆಳವಣಿಗೆ ಹಿನ್ನೆಲೆಯಲ್ಲಿ ತಂತ್ರಜ್ಞಾನ ವರ್ಗಾವಣೆ, ಉತ್ಪಾದನಾ ಪಾಲುದಾರಿಕೆಗಳು ಮತ್ತು ಹಸಿರು ವಿಮಾನಯಾನ ಸೇರಿದಂತೆ ವಿವಿಧ ವಿಷಯಗಳ ಬಗ್ಗೆಯೂ ಚರ್ಚೆ ನಡೆಸಿದರು.

***************

ಮಧ್ಯಪ್ರದೇಶದ ಖಾಂಡ್ವಾ ಜಿಲ್ಲೆಯ ಜಮ್ಲಿ ಗ್ರಾಮದಲ್ಲಿ ಸಣ್ಣ ಸೇತುವೆಯಿಂದ ನದಿಗೆ ಟ್ರ್ಯಾಕ್ಟರ್ ಟ್ರಾಲಿ ಉರುಳಿ ಬಿದ್ದು ೧೧ ಜನರು ಮೃತಪಟ್ಟು ಮೂವರು ಗಾಯಗೊಂಡಿದ್ದಾರೆ.ದುರ್ಗಾ ವಿಗ್ರಹ ವಿಸರ್ಜನೆಯಿಂದ ಹಿಂತಿರುಗುತ್ತಿದ್ದ ಟ್ರಾಲಿಯಲ್ಲಿ ಒಟ್ಟು ೧೪ ಭಕ್ತರಿದ್ದರು. ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆ ತಡರಾತ್ರಿಯವರೆಗೂ ಮುಂದುವರೆದಿತ್ತು."ಪ್ರಧಾನಿ ನರೇಂದ್ರ ಮೋದಿ ಅಪಘಾತದ ಬಗ್ಗೆ ತೀವ್ರ ದುಃಖ ವ್ಯಕ್ತಪಡಿಸಿದ್ದಾರೆ ಮತ್ತು ದುರಂತದಲ್ಲಿ ಪ್ರಾಣ ಕಳೆದುಕೊಂಡವರ ಕುಟುಂಬಗಳಿಗೆ ತಮ್ಮ ಸಂತಾಪ ವ್ಯಕ್ತಪಡಿಸಿದ್ದಾರೆ. ಗಾಯಗೊಂಡವರು ಶೀಘ್ರವಾಗಿ ಚೇತರಿಸಿಕೊಳ್ಳಬೇಕೆಂದು ಪ್ರಾರ್ಥಿಸಿದ್ದಾರೆ.ಮೃತರ ಹತ್ತಿರದ ಸಂಬಂಧಿಕರಿಗೆ ಎರಡು ಲಕ್ಷ ರೂಪಾಯಿ ಮತ್ತು ಗಾಯಗೊಂಡವರಿಗೆ ತಲಾ ಐವತ್ತು ಸಾವಿರ ರೂಪಾಯಿಗಳ ಪರಿಹಾರ ಘೋಷಿಸಿದ್ದಾರೆ. ಮುಖ್ಯಮಂತ್ರಿ ಮೋಹನ್ ಯಾದವ್ ಮೃತರ ಕುಟುಂಬಗಳಿಗೆ ನಾಲ್ಕು ಲಕ್ಷ ರೂಪಾಯಿಗಳ ಪರಿಹಾರವನ್ನು ಪ್ರಕಟಿಸಿದ್ದಾರೆ.

***************

ಹಿರಿಯ ಗಾಂಧಿವಾದಿ, ಸಮಾಜವಾದಿ ಮತ್ತು ಸ್ವಾತಂತ್ರ್ಯ ಹೋರಾಟಗಾರ ಜಿ.ಜಿ. ಪಾರಿಖ್ ಮುಂಬೈನಲ್ಲಿ ನಿನ್ನೆ ನಿಧನರಾದರು. ಅವರಿಗೆ ೧೦೦ ವರ್ಷ ವಯಸ್ಸಾಗಿತ್ತು. ಪಾರಿಖ್ ೧೯೪೨ ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಯ ಸಮಯದಲ್ಲಿ ಜೈಲು ಶಿಕ್ಷೆ ಅನುಭವಿಸಿದ್ದರು. ನಂತರ ತುರ್ತು ಪರಿಸ್ಥಿತಿಯ ಸಮಯದಲ್ಲಿಯೂ ಸೆರೆವಾಸಕ್ಕೆ ಒಳಗಾಗಿದ್ದರು.

ವಿದ್ಯಾರ್ಥಿ ನಾಯಕರಾಗಿ ತಮ್ಮ ಸಾರ್ವಜನಿಕ ಜೀವನವನ್ನು ಪ್ರಾರಂಭಿಸಿದ ಅವರು, ೧೯೪೦ ರ ದಶಕದ ಆರಂಭದಲ್ಲಿ ಸೌರಾಷ್ಟ್ರ ಮತ್ತು ಮುಂಬೈ ಚಳುವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು.

***************

ನವದೆಹಲಿಯಲ್ಲಿ ನಡೆಯುತ್ತಿರುವ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ, ಭಾರತ ಇನ್ನೂ ಎರಡು ಪದಕಗಳನ್ನು ಗೆಲ್ಲುವ ಮೂಲಕ ಒಟ್ಟು ೪ ಚಿನ್ನ, ೫ ಬೆಳ್ಳಿ ಮತ್ತು ೨ ಕಂಚಿನ ಪದಕಗಳನ್ನು ತನ್ನದಾಗಿಸಿಕೊಂಡಿದೆ. ಇದರೊಂದಿಗೆ, ಭಾರತ ಪದಕಗಳ ಪಟ್ಟಿಯಲ್ಲಿ ಏಳನೇ ಸ್ಥಾನದಲ್ಲಿದೆ.ಪ್ಯಾರಾಲಿಂಪಿಕ್ ಚಾಂಪಿಯನ್ ಧರಮ್‌ಬೀರ್ ನೈನ್ ಪುರುಷರ ಎಫ್೫೧ ಕ್ಲಬ್ ಥ್ರೋನಲ್ಲಿ ೨೯.೭೧ ಮೀಟರ್‌ಗಳ ಅತ್ಯುತ್ತಮ ಪ್ರಯತ್ನದೊಂದಿಗೆ ಬೆಳ್ಳಿ ಗೆದ್ದರು. ಸೆರ್ಬಿಯಾದ ಅಲೆಕ್ಸಾಂಡರ್ ರಾಡಿಸಿಕ್ ಚಿನ್ನ ಗೆದ್ದರು.ಪುರುಷರ ಡಿಸ್ಕಸ್ ಥ್ರೋ ಎಫ್೫೭ ನಲ್ಲಿ, ಅತುಲ್ ಕೌಶಿಕ್ ೪೫.೬೧ ಮೀಟರ್‌ಗಳ ದೂರ ಎಸೆದು ಕಂಚಿನ ಪದಕ ಗಳಿಸಿದರು. ಲಿಬಿಯಾದ ಮಹಮೂದ್ ರಜಬ್ ಚಿನ್ನ ಗೆದ್ದರು.

***************

ನಾರ್ವೆಯ ಫೋರ್ಡ್‌ನಲ್ಲಿ ನಿನ್ನೆ ನಡೆದ ವೇಯ್ಟ್ ಲಿಫ್ಟಿಂಗ್ ವಿಶ್ವ ಚಾಂಪಿಯನ್‌ಶಿಪ್‌ನ ಮಹಿಳೆಯರ ೪೮ ಕೆಜಿ ವಿಭಾಗದಲ್ಲಿ ಭಾರತದ ಮೀರಾಬಾಯಿ ಚಾನು ಬೆಳ್ಳಿ ಪದಕ ಗೆದ್ದಿದ್ದಾರೆ.ಚಾನು ಅವರು ೮೪ ಕೆಜಿ ಸ್ನ್ಯಾಚ್ ಹಾಗೂ ೧೧೫ ಕೆಜಿ ಕ್ಲೀನ್ ಮತ್ತು ಜರ್ಕ್ ಸೇರಿದಂತೆ ಒಟ್ಟು ೧೯೯ ಕೆಜಿ ಭಾರ ಎತ್ತಿ ಎರಡನೇ ಸ್ಥಾನ ಪಡೆದರು.ಇದು ೨೦೨೨ ರ ನಂತರ ಚಾನು ಅವರ ಮೊದಲ ವಿಶ್ವ ಚಾಂಪಿಯನ್‌ಶಿಪ್ ಮತ್ತು ೨೦೨೪ ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ನಾಲ್ಕನೇ ಸ್ಥಾನ ಪಡೆದ ನಂತರ ಅವರ ಎರಡನೇ ಸ್ಪರ್ಧೆಯಾಗಿದೆ. ಒಟ್ಟು ೨೧೩ ಕೆಜಿ ಭಾರ ಎತ್ತಿದ ಹಾಲಿ ವಿಶ್ವ ಚಾಂಪಿಯನ್ ಕೊರಿಯಾದ ರಿ ಸಾಂಗ್-ಗಮ್ ಚಿನ್ನದ ಪದಕ ಗೆದ್ದುಕೊಂಡರು.

***************

ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಮೊದಲ ಕ್ರಿಕೆಟ್ ಟೆಸ್ಟ್ ಪಂದ್ಯದ ಎರಡನೇ ದಿನದಾಟದಲ್ಲಿ ಭಾರತ ವೆಸ್ಟ್ ಇಂಡೀಸ್ ವಿರುದ್ಧ ಎರಡು ವಿಕೆಟ್‌ಗೆ ೧೨೧ ರನ್‌ಗಳೊಂದಿಗೆ ತನ್ನ ಮೊದಲ ಇನ್ನಿಂಗ್ಸ್ ಅನ್ನು ಇಂದು ಪುನರಾರಂಭಿಸಲಿದೆ........